**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.202/2021

**PW**. 8

**CW**. 11

**ಸಾಕ್ಷಿಯ ಹೆಸರು –ಮಂಜುನಾಥ ಎನ್ ಕೆ**

**ತಂದೆಯ ಹೆಸರು –ಕಾರ್ಯಪ್ಪ**

**ವಯಸ್ಸು –47 ವರ್ಷಗಳು** ದಿನಾಂಕ 27–05–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಫೋಟೋಗ್ರಾಫರ್, ಹುಣಸೂರು**

**ವಾಸಸ್ಥಳ –ಹುಣಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಕಳೆದ 25 ವರ್ಷಗಳಿಂದ ಕಾವೇರಿ ಡಿಜಿಟಲ್ ಫೋಟೋ ಸ್ಟುಡಿಯೋವನ್ನು ನಡೆಸುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತೆಗೆದಿದ್ದ ಫೋಟೋಗಳನ್ನು ನನ್ನ ಸಮ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ ಕೊಟ್ಟಿದ್ದು ,ಆ ಬಗ್ಗೆ ಹಣ ಪಡೆದು ಪೊಲೀಸರಿಗೆ ರಸೀದಿ ಕೊಟ್ಟಿರುತ್ತೇನೆ. ಸದರಿ ರಸೀದಿಯನ್ನು ಈಗ ನೋಡುತ್ತಿದ್ದು ನಿಪಿ–18 ಎಂದು ಗುರುತಿಸಲಾಯಿತು. ನಾನು ಪ್ರಿಂಟ್ ಹಾಕಿ ಕೊಟ್ಟಿದ್ದ ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ–3 ರಿಂದ 9 ದ 11 ಮತ್ತು 12 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ–**

ನಮ್ಮ ಸ್ಟುಡಿಯೋದಲ್ಲಿ ಯಾವುದೇ ಫೋಟೋಗಳನ್ನು ಪ್ರಿಂಟ್ ಹಾಕಿಲ್ಲದಿದ್ದರೂ ಕೂಡ ಪೊಲೀಸರ ಕೋರಿಕೆಯ ಮೇರೆಗೆ ನಿಪಿ–**18** ಅನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**SC No.202/2021**
**PW. 8**

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.